

ಗೋರಿಯಿಂದ ಹೆಕ್ಕಿತಂದಿರುವ ಪಳಯುಳಿಕೆ

# ಜನಾಂಗೀಯ ವಸ್ತು ಸಂಗ್ರಹಾಲಯ

## ತಜಕಿಸ್ತಾನ್ ಮ್ಯೂಸಿಯಂನಲ್ಲಿ ಭಾರತ ದರ್ಶನ

**ತಜಕಿಸ್ತಾನಕ್ಕೆ ಹೋದವರು ಅಲ್ಲಿನ ಜನಾಂಗೀಯ ವಸ್ತಸಂಗ್ರಹಾಲಯ ನೋಡದಿದ್ದರೆ ಅದು ಪ್ರವಾಸವನ್ನು ಅಪೂರ್ಣಗೊಳಿಸುತ್ತದೆ. ಇತಿಹಾಸದ ಅಪೂರ್ವ ಸ್ಮೃತಿಗಳನ್ನು ಹೊಂದಿರುವ ಈ ಸಂಗ್ರಹಾಲಯ, ಭಾರತೀಯ ಸಂಸ್ಕೃತಿಯ ನೆನಪುಗಳನ್ನೂ ತಳಕು ಹಾಕಿಕೊಂಡಿದೆ.**

■ **ನಿರಂಜನ ವಾನಳ್ಳಿ**

ಸೋವಿಯತ್ ಒಕ್ಕೂಟದ ಭಾಗವಾಗಿದ್ದ ತಜಕಿಸ್ತಾನ ಸ್ವತಂತ್ರ ಅಸ್ತಿತ್ವ ಹೊಂದಿ 28 ವರ್ಷಗಳಾದವಷ್ಟೇ. ಈ ಅವಧಿಯಲ್ಲಿ ಮೊದಲ ಹತ್ತು ವರ್ಷ ಅಂತರ್ಯುದ್ಧ ಆ ದೇಶವನ್ನು ಹೈರಾಣಗೊಳಿಸಿತ್ತು. 2001ರ ನಂತರವಷ್ಟೇ ತಜಕಿಸ್ತಾನವು ಗಟ್ಟಿಯಾಗಿ ಸ್ವತಂತ್ರ ರಾಷ್ಟ್ರವಾಗಿ ಜಾಗತಿಕ ಮಟ್ಟದಲ್ಲಿ ನಿಲ್ಲಲು ಸಾಧ್ಯವಾಯ್ತು. ಶೇ. 95ರಷ್ಟು ಮುಸ್ಲಿಮರೇ ಇರುವ ದೇಶ ಇಸ್ಲಾಮಿಕ್ ಮೂಲಭೂತವಾದಿಗಳ ಹಿಡಿತದಲ್ಲಿಲ್ಲ ಎಂಬುದು ವಿಶೇಷ. ಇದಕ್ಕೆ ಎರಡು ದಶಕಗಳಿಂದ ದೇಶಕ್ಕೆ ಗಟ್ಟಿ ನಾಯಕತ್ವ ನೀಡಿರುವ ಇಮಾಮೊಲಿ ರಹಮಾನ್ ಕಾರಣ. ಅವರು ದೇಶವು ಎಲ್ಲ ಧರ್ಮೀಯರ ನೆಮ್ಮದಿಯ ನೆಲೆವೀಡಾಗುವಂತೆ ಮಾಡಲು ಶ್ರಮಿಸುತ್ತಿದ್ದಾರೆ. ಮುಖ್ಯವಾಗಿ ಧರ್ಮದ ಹೆಸರಿನಲ್ಲಿ ರಾಕ್ಷಸೀ ಕೃತ್ಯಗಳು ನಡೆಯದಂತೆ ತಡೆಯೊಡ್ಡಿದ್ದಾರೆ. ಎಲ್ಲೆಲ್ಲೂ ತಜಕಿಸ್ತಾನದ ಬಗ್ಗೆ ಜನಕ್ಕೆ ಸ್ವಾಭಿಮಾನ ಉಂಟಾಗುವಂತೆ ಹಾಗೂ ಅಲ್ಲಿನ ನೆಲ–ಜಲ, ಜನಾಂಗಗಳ ಚರಿತ್ರೆ ಅಳಿಯದಂತೆ ಕಾಪಿಡಲು ಒತ್ತಾಸೆ ನೀಡಿದ್ದಾರೆ. ಇದಕ್ಕೆ ಸೂಕ್ತ ಉದಾಹರಣೆಯೆಂದರೆ, ಸ್ವಾತಂತ್ರ್ಯ ಬಂದ ನಂತರವೇ ಖಚಿತರೂಪ ತಳೆದು ಬೆಳೆದ ದುಶಾಂಬೆಯ ಜನಾಂಗೀಯ ವಸ್ತುಸಂಗ್ರಹಾಲಯ. ತಜಕಿಸ್ತಾದ ಚರಿತ್ರೆಯ ಬೇರುಗಳನ್ನು ಪರಿಚಯಿಸುವ ಜೊತೆಗೆ ಮಧ್ಯ ಏಷಿಯಾದ ಈ ಭೂಪ್ರದೇಶವು ಪ್ರಾಚೀನಕಾಲದಲ್ಲಿ ಭಾರತಕ್ಕೆ, ಅಲ್ಲಲ್ಲ, ಅವರೇ ಹೇಳುವಂತೆ ಹಿಂದೂಸ್ತಾನಕ್ಕೆ ಎಷ್ಟು ಹತ್ತಿರವಾಗಿತ್ತು ಎಂಬುದನ್ನೂ ಸಾಂಸ್ಕೃತಿಕ ಪಳೆಯುಳಿಕೆಗಳ ಮೂಲಕ ಬಿಂಬಿಸುತ್ತದೆ.



ಮಲಗಿರುವ ಬುದ್ಧ



ರುಂಡವಿಲ್ಲದ ಶಿವ–ಪಾರ್ವತಿ ಮೂರ್ತಿ